ಹೇಳುತ್ತಿರುವುದು ಯಲಹಂಕದಲ್ಲಿ ಒಳಚರಂಡಿ ವ್ಯವಸ್ಥೆ ಎಲ್ಲಿದೆ ಸರ್? ಬ್ಯಾಟರಾಯನಪುರದಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 5052
ಸದಸ್ಯರ ಹೆಸರು : ಶ್ರೀ ಕೃಷ್ಣಮೂರ್ತಿ ಕೆ.ಎಂ. ಎಂ.ಎಲ್.ಎ.
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕಡೂರು ಪುರಸಭೆಯ ವ್ಯಾಪ್ತಿಯಲ್ಲಿ ಹೊಸ ಬಡಾವಣೆಗಳು ಕಳದ 3 ವರ್ಷದಲ್ಲಿ ರೂಪುಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಹೌದು
ಆ.	ಹಾಗಿದ್ದಲ್ಲಿ ಈ ಭಾಗವನ್ನು ಹೊಸ ವಾರ್ಡ್‌ಗಳಾಗಿ ಮಾಡಲು ಸರ್ಕಾರದಲ್ಲಿ ಅವಕಾಶ ಮಾಡಲಾಗಿದೆಯೇ?	ಹೊಸ ಬಡಾವಣೆಗಳು ಪುರಸಭೆ ವ್ಯಾಪ್ತಿಗೆ ಸೇರದೇ ಇರುವುದರಿಂದ ಇವುಗಳನ್ನು ವಾರ್ಡ್‌ಗಳಾಗಿ ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ
ಇ.	ಈ ಬಗ್ಗೆ ಜನಸಂಖ್ಯೆ ಅನುಸರಿಸಿ ವಾರ್ಡ್ ಮಾಡಲು ಜಿಲ್ಲಾಧಿಕಾರಿಯವರಿಗೆ ಸರ್ಕಾರದ ನಿರ್ದೇಶನ ನೀಡಲಾಗಿದೆಯೇ?(ವಿವರ ನೀಡುವುದು)	ಪುರಸಭೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಮಾತ್ರ 2001 ರ ಜನ ಗಣತಿ ಅನುಸರಿಸಿ ವಾರ್ಡ್ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಶ್ರೀ ಎನ್. ಧರ್ಮಸಿಂಗ್ : ಬೆಂಗಳೂರುನಗರದಲ್ಲಿರತಕ್ಕಂಥ ಸಮಸ್ಯೆಗಳ ಬಗ್ಗೆ ಏನು ಮಾಡಬೇಕೆಂಬುದನ್ನು ನಾವು ನೋಡುತ್ತೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ, ಕಡೂರಿನ ಹೊಸ ಬಡಾವಣೆಗಳಲ್ಲಿ ಸುಮಾರು ಎರಡೂವರೆ ಸಾವಿರ ನಿವೇಶನಗಳನ್ನು ಕೊಟ್ಟಿದ್ದೇವೆ. 1300 ಮನೆಗಳನ್ನು ಕೊಟ್ಟಿದ್ದೇವೆ. ಅದು ಗ್ರಾಮಿಣ ಪ್ರದೇಶದಲ್ಲಿರುವು ದರಿಂದ ಮೂಲಭೂತಸೌಕರ್ಯಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅವತ್ತೇನು ನಾವು ನಿವೇಶನಗಳನ್ನು ಮಾಡಬೇಕಾದಾಗ ರಸ್ತೆಗಳನ್ನು ಮಾಡಿದ್ದು ಆ ರಸ್ತೆಗಳನ್ನು ಇವತ್ತು ಸರಿ ಮಾಡುವುದಕ್ಕೆ ಪುರಸಭೆಯಲ್ಲಿ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ, ಆದರೆ ಇಲ್ಲಿ ಎಷ್ಟು ಬೇಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟಿದ್ದಾರೆಂದರೆ, ನಾವು ನಿವೇಶನ ಕೊಟ್ಟಿರುವುದು ಪಟ್ಟಣದವರಿಗೆ ಮೂಲಭೂತ ಸೌಕರ್ಯ ಕೊಡಬೇಕಾದ್ದು ಪಟ್ಟಣದಲ್ಲಿ ವಾಸ ಮಾಡುತ್ತಿದ್ದಂತಹ ಜನರಿಗೆ, ಆದರೆ ಇಲ್ಲಿ ಅದು ಹೌದು ಎಂದು ಹೇಳಿದ್ದಾರೆಯೇ ಹೊರತು ಅದರ ಬಗ್ಗೆ ಮಾನ್ಯ ಸಚಿವರು, ಯಾವುದಾದರೂ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲೂ ಅಥವಾ ಇನ್ಯಾವುದಾದರು ಅನುದಾನದ ಮೂಲಕ ಮೂಲಭೂತ ಸೌಕರ್ಯಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಅವರಿಗೆ ಒತ್ತಾಯ ಮಾಡುತ್ತೇನೆ. ಹಾಗಿದ್ದಲ್ಲಿ ಈ ಭಾಗವನ್ನು ಹೊಸ ವಾರ್ಡ್‌ಗಳಾಗಿ ಮಾಡಲು ಸರ್ಕಾರದಲ್ಲಿ ಅವಕಾಶ ಮಾಡಲಾಗಿದೆಯೇ ? ಎಂದು ಏತಕ್ಕೆ ಎರಡನೆ ಪ್ರಶ್ನೆಯನ್ನು ಕೇಳಿದ್ದೇನೆಂದರೆ, ಆ ಭಾಗಗಳಿಗೆ ಸದಸ್ಯರನ್ನು ಜನ ಚುನಾಯಿತ ಪ್ರತಿನಿಧಿಯಾಗಿ ಆಯ್ಕೆ ಮಾಡಿದರೆ, ಆ ಪುರಸಭೆಯಲ್ಲಿ ಚುನಾಯಿತ ಪ್ರತಿನಿಧಿಯಾಗಿ ಆ ಜನರಿಗೆ ಮೂಲಭೂತ ಸೌಕರ್ಯಗಳನ್ನು ಕೊಡಿಸುವುದಕ್ಕೆ ಸಾಧ್ಯವಾಗಬಹುದೆನ್ನುವ ಉದ್ದೇಶದಿಂದ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದರೆ ಕೊಟ್ಟಿರುವ ಉತ್ತರ ಸಮಂಜಸವಾಗಿಲ್ಲ ಈಗಾಗಲೆ ಟೌನ್ ಪ್ಲಾನಿಂಗ್‌ರವರು ಅರುವನಹಳ್ಳಿ, ಮಲ್ಲೇಶ್ವರ, ಕುರವನಹಳ್ಳಿ, ಬಂಡಿಕೊಪ್ಪಲು ತಂಗಲಿತಾಂಡ್ಯ, ಇವುಗಳ ಬಗ್ಗೆಯು ಟೌನ್ ಪ್ಲಾನಿಂಗ್‌ನಿಂದ ಮಾಹಿತಿಯನ್ನು ತರಿಸಿಕೊಳ್ಳುವುದರಲ್ಲಿ ಇಲಾಖೆಯವರು ವಿಫಲರಾಗಿದ್ದಾರೆ. ಆದುದರಿಂದ ಉತ್ತರ ಏನಾದರೂ ಇರಲಿ ಮಾನ್ಯ ಸಚಿವರು ನಾಳೆ ಅಭಿವೃದ್ದಿಪಡಿಸುತ್ತೇವೆನ್ನುವ ಭರವಸೆಯನ್ನಾದರು ಇಲ್ಲಿ ಸದನದಲ್ಲಿ ಕೊಡಬೇಕಾಗುತ್ತದೆ. ನನ್ನ ಪ್ರಶ್ನೆಗೆ ಇಲಾಖೆಯವರು ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಆದುದರಿಂದ ಪುರಸಭೆ ವ್ಯಾಪ್ತಿಯಲ್ಲಿ 2001 ರ ಜನಸಂಖ್ಯೆ ಮೇಲೆ ನಾವು ಕೊಟ್ಟು ವಾರ್ಡ್ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ. ಈಗಾಗಲೇ ನಾವು ಕೊಟ್ಟು 5 ವರ್ಷವಾಯಿತು. ಎಸ್.ಎಂ.ಕೃಷ್ಣ ಬಡಾವಣೆ. ಮುದಿಯಪ್ಪ ಬಡಾವಣೆ. ಕೆ ಆರ್ ಹೊನ್ನಪ್ಪ ಬಡಾವಣೆ, ತಮ್ಮಯ್ಯ ಬಡಾವಣೆ ಹೀಗೆ ಅಲ್ಲಿ 2400 ನಿವೇಶನಗಳನ್ನು ಕೊಟ್ಟಿದ್ದೇವೆ, ಅಲ್ಲಿ ಮೂಲಭೂತ

ಸೌಕರ್ಯಗಳನ್ನು ಕೊಡಬೇಕಾದರೆ ಅವನ್ನು ವಾರ್ಡ್‌ಗಳನ್ನಾಗಿಯಾದರೂ ಮಾಡಬೇಕು. ಇಲ್ಲ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಆರ್.ಮೋರೆ (ಪೌರಾಡಳಿತ ಸಚಿವರು) : ಮಾನ್ಯರೆ, ಈ ಕಡೂರು ಪುರಸಭೆ ವ್ಯಾಪ್ತಿಯಿಂದ 3 ಕಿ.ಮೀ. ಆಚೆ ಅಶ್ರಯ ಯೋಜನೆಯಡಿಯಲ್ಲಿ ನಿವೇಶನ ರಹಿತರಿಗೆ ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಅವರು ಹೇಳಿದ್ದು ನಿಜ. ಅದು ಪುರಸಭೆ ವ್ಯಾಪ್ತಿಯ ಹೊರಗಿದ್ದರು ಕೂಡ ನಾವು ಅಲ್ಲಿಗೆ ಮೂಲಭೂತ ಸೌಕರ್ಯಗಳನ್ನು ಕೊಡುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರು ಕೇಳಿದ್ದು ಅದನ್ನು ವಾರ್ಡಗಳನ್ನಾಗಿ ಮಾಡುವುದ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ಎಂದು ಕೇಳುತ್ತಿದ್ದಾರೆ. ಈಗ ಇದೆ ಸರ್ಕಾರ ಅದನ್ನು ಕೂಡ 2001 ರ ಜನಗಣತಿಯ ಆಧಾರದ ಮೇಲೆ ಹೆಚ್ಚಿಗೆ ವಾರ್ಡ್‌ಗಳನ್ನು ಮಾಡಬೇಕೆಂದು ಉದ್ದೇಶವಿದೆ. ಆದರೆ ಈ ಸಮಯದಲ್ಲಿ ಕೇಂದ್ರ ಚುನಾವಣಾ ಆಯೋಗ ಈಗ ನಮಗೆ ನಿರ್ಭಂದ ಹಾಕಿದ್ದಾರೆ, ಅದೇನೆಂದರೆ, ಚುನಾವಣೆ ಆಯೋಗ ವಿಧಾನಸಭೆ ಹಾಗೂ ಲೋಕಸಭೆ ಕ್ಷೇತ್ರಗಳನ್ನು ಏಂಗಡಣೆ ಮಾಡುವವರೆಗೆ ತಾವು ಯಾವುದೆ ಬದಲಾವಣೆ ಮಾಡಬಾರದೆಂದು ನಮಗೆ ನಿರ್ಬಂಧ ಏರಿದ್ದರಿಂದ ನಾವು ವಾರ್ಡ್‌ಗಳನ್ನು ಹೆಚ್ಚಿಗೆ ಮಾಡಿಲ್ಲ. ಇನ್ನೇನು 5–6 ತಿಂಗಳಲ್ಲಿ ಆ ನಿರ್ಭಂಧ ಹಿಂತೆಗೆದುಕೊಳ್ಳುತ್ತಾರೆಂದು ನಮಗನಿಸುತ್ತದೆ, ಅದಾದ ಮೇಲೆ ಅಲ್ಲಿ ಹೆಚ್ಚಿನ ವಾರ್ಡ್‌ಗಳನ್ನು ಮಾಡುವ ಬಗ್ಗೆ ನಾನು ಈಗಾಗಲೇ ಜಿಲ್ಲಾಧಿಕಾರಿಗಳಿಗೂ ನಾನು ನಿರ್ದೇಶನ ನೀಡಿ 2001 ನೇ ಜನಗಣತಿಯ ಆಧಾರದ ಮೇಲೆ ಹೊಸ ವಾರ್ಡ್‌ಗಳನ್ನು ಮಾಡಬೇಕೆಂದು ತಿಳಿಸಿದ್ದೇನೆ ಅದಾದ ಮೇಲೆ ನಾವು ಮಾಡುತ್ತೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ : ಅವರು ಈಗಾಗಲೇ ಮೂರು ವರ್ಷಗಳಿಂದ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಈಗೇನು ನಿರ್ಭಂಧವಿದೆ ಅದು ಸಡಿಲವಾದ ಮೇಲೆಯೇ ವಾರ್ಡ್‌ಗಳನ್ನು ಮಾಡಿಕೊಳ್ಳಲಿ, ಆದರೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಸರ್ಕಾರದಿಂದ ಹೆಚ್ಚುವರಿ ಅನುದಾನ ಕೊಡಿಸುವ ಪ್ರಯತ್ನ ಅವರಿಂದಾಗಬೇಕು. ಏಕೆಂದರೆ, ಅವರಿಗೆ ಕುಡಿಯುವ ನೀರಿಲ್ಲ ವಿದ್ಯುತ್‌ದೀಪವಿಲ್ಲ, ರಸ್ತೆಗಳಿಲ್ಲ, ಪುರಸಭೆ ಇವತ್ತು ಆರ್ಥಿಕವಾಗಿ ಬಹಳ ಕಷ್ಟದಲ್ಲಿದೆ. ಅದಕ್ಕೆ ಸಚಿವರು ಏನಾದರೂ ಭರವಸೆಯನ್ನು ಕೊಡಬೇಕೆಂದು ಕೇಳಬಯಸುತ್ತೇನೆ.